**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ**

**ಸಿ.ಸಿ. 1046/2025**

**ಫಿರ್ಯಾದಿ :** ಸರ್ಕಾರದ ಪರವಾಗಿ ವಲಯ ಅರಣ್ಯಾಧಿಕಾರಿ,
ವನ್ಯಜೀವಿ ವಲಯ, ಹಾರೋಹಳ್ಳಿ.

**ವಿರುದ್ದ**

**ಆರೋಪಿತರು :** 1) ಶಿವಮಾದ ಬಿನ್ ಕಾಳಯ್ಯ,
ವಯಸ್ಸುಃ 28 ವರ್ಷ,

2) ಬಸವರಾಜು ಬಿನ್ ಬಸವಯ್ಯ,
ವಯಸ್ಸುಃ 35 ವರ್ಷ,

ಇಬ್ಬರ ವಾಸಃ ಗೊಲ್ಲರದೊಡ್ಡಿ ಗ್ರಾಮ,
ಮರಳವಾಡಿ ಹೋಬಳಿ,
ರಾಮನಗರ ಜಿಲ್ಲೆ.

**ದಂಡ ಪ್ರಕ್ರಿಯ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ವಿಚಾರಣೆ**

ಪ್ರಶ್ನೆ: 1: ನೀವು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯವನ್ನು ಕೇಳಿರುವಿರಾ?

ಉತ್ತರಃ

ಪ್ರಶ್ನೆ: 2: ಪ್ರಾಸಾ-1 ವೀರಭದ್ರಯ್ಯ ರವರು, ತಮ್ಮ ಸಾಕ್ಷ್ಯದಲ್ಲಿ, ದಿಃ 03.07.2016 ರಂದು ಕೋಡಿ ಗೆರೆ ಬಳಿ ತಾನು, ಚಾಸಾ-1 , ಚಾಸಾ-3 , 4 ರವರು ರಾತ್ರಿ ಪಾಳಿ ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ 4.30 ರಲ್ಲಿ ಕಾಡಿನಲ್ಲಿ ಬ್ಯಾಟರಿ ಬೆಳಕು ಕಾಣಿಸಿರುತ್ತದೆ. ತಾವು ಪೊದೆಯಲ್ಲಿ ಅವಿತು ಕುಳಿತುಕೊಂಡೆವು. 4.35 ಕ್ಕೆ ಇಬ್ಬರು ಬೇಟೆ ಮಾಡಲು ಬರುತ್ತಿದ್ದರು. ಆರೋಪಿ 1 ರವರ ಕೈಯಲ್ಲಿ ನಾಡ ಬಂದೂಕು ಇದ್ದಿತ್ತು. ಆರೋಪಿ 1 ರವರನ್ನು ಹಿಡಿದ ಕೂಡಲೇ ಆರೋಪಿ 2 ಓಡಿ ಹೋಗಿರುತ್ತಾನೆ. ಆರೋಪಿ 1 ರವರನ್ನು ಗನ್ ಮತ್ತು ಬ್ಯಾಟರಿ ಸಮೇತ ಹಿಡಿದು ಕಛೇರಿಗೆ ಕರೆದುಕೊಂಡು ಹೋಗಿರುತ್ತೇನೆ. ನಂತರ ಬೆಳಗಿನ ಜಾವ ಸ್ಥಳದಲ್ಲಿ ಮಹಜರ್ ಮಾಡಿ ಕಛೇರಿಗೆ ಕರೆದುಕೊಂಡು ಬಂದು ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ :3: ಪ್ರಾಸಾ-2 ಕಾಳನಾಯಕ ರವರು, ತಮ್ಮ ಸಾಕ್ಷ್ಯದಲ್ಲಿ, ದಿಃ 03.07.2016 ರಂದು ಕೋಡಿ ಗೆರೆ ಬಳಿ ತಾನು, ಚಾಸಾ-1, ಚಾಸಾ-2, ಚಾಸಾ-4 ರವರು ರಾತ್ರಿ ಪಾಳಿ ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ 4.30 ರಲ್ಲಿ ಕಾಡಿನಲ್ಲಿ ಬ್ಯಾಟರಿ ಬೆಳಕು ಕಾಣಿಸಿರುತ್ತದೆ. ಆಗ ತಾವು ಆರೋಪಿ 1 ರವರನ್ನು ಹಿಡಿದಿರುತ್ತೇವೆ. ಯಾಕೆ ನೀವು ಇಲ್ಲಿಗೆ ಬಂದಿದ್ದೀಯಾ ಎಂದು ಕೇಳಿದಾಗ, ಆತ ಬೇಟೆಯಾಡಲು ಬಂದಿದ್ದೆ, ತನ್ನ ಜೊತೆ ಬಸವರಾಜು ಬಂದಿದ್ದನು ಆತ ಓಡಿ ಹೋಗಿರುವುದಾಗಿ ಹೇಳಿರುತ್ತಾರೆ.

ಆತನನ್ನು ಫಾರೆಸ್ಟರ್ ವಿಚಾರಣೆಗೆ ಕರೆದುಕೊಂಡು ಹೋಗಿರುತ್ತಾರೆ. ಸ್ಥಳದಲ್ಲಿ ಮಹಜರನ್ನು ಮಾಡಿರುತ್ತಾರೆ. ಮಹಜರ್ ಸಮಯದಲ್ಲಿ ಒಂದು ಗನ್ ಮತ್ತು ಬ್ಯಾಟರಿಯನ್ನು ಜಪ್ತು ಪಡಿಸಿಕೊಂಡಿರುವುದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ : 4: ಪ್ರಾಸಾ-3 ಕಿಶೋರ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03.07.2016 ರಂದು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಹಾರೋಹಳ್ಳಿ ವಲಯ, ಮರಳವಾಡಿ ಶಾಖೆಯಲ್ಲಿ ಕೋಡಿಗೆರೆ ನೆಡತೋಪಿನಲ್ಲಿ ರಾತ್ರಿ ಗಸ್ತು ಮಾಡುತ್ತಿರುವಾಗ ಸುಮಾರು ರಾತ್ರಿ 4.30 ರ ಸಮಯದಲ್ಲಿ ಯಾರೋ ಆಸಾಮಿಗಳು ನೆಡತೋಪಿನಲ್ಲಿ ಬ್ಯಾಟರಿ ಹಾಕಿಕೊಂಡು ಓಡಾಡುತ್ತಿರುವುದು ಕಂಡು ಬಂದಿರುತ್ತದೆ. ಕೋಡಿಗೆರೆ ಚೆಕ್ ಡ್ಯಾಮ್ ಬಳಿ ಈ ಘಟನೆ ಆಗಿರುತ್ತದೆ. ಬ್ಯಾಟರಿ ಬೆಳಕು ಕಂಡ ತಕ್ಷಣ ತಾನು ಮತ್ತು ಚಾಸಾ-2, ಚಾಸಾ-3 ರವರು ಪೊದೆಯ ಬಳಿ ಅಡಗಿಕೊಂಡು ಅವರು ಹತ್ತಿರ ಬಂದ ತಕ್ಷಣ ಆರೋಪಿಗಳನ್ನು ಹಿಡಿಯಲು ಪ್ರಯತ್ನಪಟ್ಟಾಗ ಒಬ್ಬ ತಪ್ಪಿಸಿಕೊಂಡ, ಸಿಕ್ಕಿಕೊಂಡ ಆರೋಪಿಯನ್ನು ವಿಚಾರಿಸಲಾಗಿ ಶಿವಮಾದ ಬಿನ್ ಕಾಳಯ್ಯ, ಮರಳವಾಡಿ ಹೋಬಳಿ ನಿವಾಸಿ ಎಂದು ತಿಳಿಸಿರುತ್ತಾರೆ. ಅವರ ಜೊತೆ ಬಂದಂತಹ ಮತ್ತೊಬ್ಬ ಆರೋಪಿಯ ಬಗ್ಗೆ ವಿಚಾರಿಸಲಾಗಿ ಪರಿಚಯಸ್ಥನಾದ ಬಸವರಾಜು ಬಿನ್ ಬಸವಯ್ಯ, ಗೊಲ್ಲರದೊಡ್ಡಿ ಎಂದು ತಿಳಿಸಿರುತ್ತಾರೆ. ತಕ್ಷಣ ಅವರ ಬಳಿ ಇದ್ದ ನಾಡ ಬಂದೂಕನ್ನು ಹಾಗೂ ಬ್ಯಾಟರಿಯನ್ನು ಇಲಾಖಾ ಪರವಾಗಿ

ವಶಪಡಿಸಿಕೊಂಡಿರುತ್ತೇವೆ. ನಂತರ ಬಂದೂಕನ್ನು ಪರಿಶೀಲಿಸಲಾಗಿ ಅದರಲ್ಲಿ ಮದ್ದುಗುಂಡು ತುಂಬಿರುವುದು ಕಂಡು ಬಂದಿರುತ್ತದೆ. ತಕ್ಷಣ ಗಾಳಿಯಲ್ಲಿ ಗುಂಡು ಹಾರಿಸಿ ಒಂಟಿ ನಳಿಗೆ ಬಂದೂಕನ್ನು ಖಾಲಿ ಮಾಡಿರುತ್ತೇನೆ. ಸದರಿ ನಳಿಕೆ ಒಂದು ಮೀಟರ್ ಉದ್ದವಿದ್ದು, 0.08 ಸುತ್ತಳತೆ ಇರುತ್ತದೆ. ಗನ್ ನ ಉದ್ದ ನಳಿಕೆಯಿಂದ 1.4 ಮೀಟರ್ ಇರುತ್ತದೆ. ತಕ್ಷಣ ಗನ್ ಮತ್ತು ಬ್ಯಾಟರಿಗೆ ಸಂಖ್ಯೆ ನೀಡಿ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರ್ ನಡೆಸಿರುವುದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ : 5: ಪ್ರಾಸಾ-4 ಮಂಜುನಾಥ ಎಂ. ಬಿ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 07.07.2016 ರಂದು ಚಾಸಾ-5 ರವರ ಹೇಳಿಕೆಯ ಮೇರೆಗೆ ಬೆಳಿಗ್ಗೆ 4.30 ಸಮಯಕ್ಕೆ ಚಾಸಾ-1 ರಿಂದ 3 ರವರು ಹಾಗೂ ತಾನು ಗಸ್ತು ಮಾಡುತ್ತಿರುವಾಗ ಟಾರ್ಚ್ ಬೆಳಕು ಕಾಣಿಸುತ್ತದೆ. ತಾವು ಅಲ್ಲೇ ಮರೆಯಲ್ಲಿ ನಿಂತು ನೋಡಲಾಗಿ ಶಿವಮಾದು ಮತ್ತು ಬಸವರಾಜು ಅವಿತುಕೊಂಡು ಕುಳಿತಿರುವುದನ್ನು ಗಮನಿಸಿರುತ್ತೇವೆ. ಶಿವಮಾದನನ್ನು ಹಿಡಿದುಕೊಂಡಿರುತ್ತೇವೆ, ಬಸವರಾಜು ತಪ್ಪಿಸಿಕೊಂಡಿರುತ್ತಾರೆ. ಚಾಸಾ-1 ರವರು ಸ್ಥಳದಲ್ಲೇ ಮಹಜರ್ ಅನ್ನು ಮಾಡಿ ಆರೋಪಿ 1 ರವರನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಮಹಜರ್ ಅನ್ನು ಬೆಳಿಗ್ಗೆ 5.15 ರಿಂದ 6.00

ಗಂಟೆವರೆಗೆ ಮಾಡಿರುತ್ತಾರೆ. ಸ್ಥಳದಿಂದ ಬಂದೂಕು ಮತ್ತು ಹಳೆಯ ಬ್ಯಾಟರಿಯನ್ನು ವಶಪಡಿಸಿಕೊಂಡಿರುವುದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ : 6: ಪ್ರಾಸಾ-5 ರವಿಕುಮಾರ್ ಟಿ. ಎಂ ರವರು ತಮ್ಮ ಸಾಕ್ಷ್ಯದಲ್ಲಿ, ತನ್ನ ಸರಹದ್ದಿಗೆ ಬರುವಂತಹ ಹಾರೋಹಳ್ಳಿ ವನ್ಯ ಜೀವಿ ವಲಯದಲ್ಲಿ ದಾಖಲಾಗಿದ್ದಂತಹ ವನ್ಯ ಜೀವಿ ಮೊಕದ್ದಮೆ ಸಂಖ್ಯೆ 2/2016-17 ರಡಿಯಲ್ಲಿ ದಿನಾಂಕ 04.07.2016 ರಂದು ತನಗೆ ಕಡತವನ್ನು ತನಿಖೆಗಾಗಿ ಶ್ರೀಮತಿ ಬಿಂದು, ವಲಯ ಅರಣ್ಯಾಧಿಕಾರಿ, ಹಾರೋಹಳ್ಳಿ ವನ್ಯಜೀವಿ ವಲಯರವರು ಸಲ್ಲಿಸಿರುತ್ತಾರೆ. ಅದರಂತೆ ಆರೋಪಿತರಿಗೆ ಹಾಗೂ ಪಿರ್ಯಾದುದಾರರಿಗೆ, ಸಾಕ್ಷಿದಾರರಿಗೆ ನೋಟಿಸ್ ಅನ್ನು ನೀಡಿ ಅವರ ಹೇಳಿಕೆಗಳನ್ನು ದಾಖಲಿಸುವಂತೆ ತಿಳಿಸಲಾಗಿರುತ್ತದೆ. ಅದರಂತೆ 04.07.2025 ರಂದು ಪಿರ್ಯಾದುದಾರರಾದ ಚಾಸಾ-1 ಹಾಗೂ ಸಾಕ್ಷಿದಾರರನ್ನು ತನ್ನ ಕಛೇರಿಯಲ್ಲಿ ಈ ಮೊಕದ್ದಮೆಗೆ ಸಂಬಂಧಿಸಿದಂತೆ ತಮ್ಮ ಲಿಖಿತ ಹೇಳಿಕೆಗಳನ್ನು ದಾಖಲಿಸಿಕೊಂಡು ಅದರಂತೆ ದಿನಾಂಕ 06.07.2025 ರಂದು ಆರೋಪಿತರು ಶಿವಮಾದು ಮತ್ತು ಬಸವರಾಜು ಅವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅವರ ಹೇಳಿಕೆಯಂತೆ ಅವರ ಕಡಿಮೆ ತಿಳುವಳಿಕೆಯಿಂದ ಬಂದೂಕು ಮತ್ತು ಬ್ಯಾಟರಿಯೊಂದಿಗೆ ಅರಣ್ಯವನ್ನು ಪ್ರವೇಶಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ಅದರಂತೆ

ತನಿಖಾಧಿಕಾರಿಯಾದ ತಾನು ದೋಷಾರೋಪಣ ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ:7: ನಿಮ್ಮ ಪರವಾಗಿ ಯಾರಾದರೂ ಸಾಕ್ಷಿಗಳಿದ್ದಾರೆಯೇ ಮತ್ತು ಯಾವುದಾದರೂ ದಾಖಲೆಗಳಿವೆಯೇ?

ಉತ್ತರಃ

ಪ್ರಶ್ನೆ: 8: ಈ ಪ್ರಕರಣದ ಬಗ್ಗೆ ಬೇರೇನಾದರೂ ಹೇಳುವುದಿದೆಯೇ?

ಉತ್ತರಃ

ಈ ಮೇಲೆ ಹೇಳಿದ ಪ್ರಶ್ನೆಗಳಿಗೆ ಆರೋಪಿತರಿಗೆ ಯಾವುದೇ ಒತ್ತಡಕ್ಕೆ ಮಣಿಯದೆ ತನ್ನ ಸ್ವ ಇಚ್ಛೆಯಿಂದ ನೀಡಿದ ಉತ್ತರಗಳನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ.

ಸಹಿ/-

ದಿನಾಂಕಃ 26-05-2026

**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕನಕಪುರ**